ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 25|1|2020

# ಸಮಾಜದಲ್ಲಿ ಮೌಲ್ಯಗಳ ಅಧಃಪತನಕ್ಕೆ ಬೇಸರ

ಸಂ.ಕ.ಸಮಾಚಾರ ಬೆಂಗಳೂರು

ಪ್ರಸ್ತುತ ಕೇವಲ ರಾಜಕೀಯ ಮಾತ್ರವಲ್ಲದೆ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಮಾನವೀಯ ಮೌಲ್ಯಗಳು ಮತ್ತು ಆದರ್ಶಗಳು ಅಧಃಪತನಗೊಂಡಿವೆ ಎಂದು ವಿಧಾನಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿ ಕಲಾಗಂಗೋತ್ರಿ ಆಯೋಜಿಸಿದ್ದ ಅಮೃತ ರಂಗಹಬ್ಬ ಮತ್ತು ಮುಖ್ಯಮಂತ್ರಿ 700ರ ಸಮಾರಂಭದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ನಾಟಕ ಇವತ್ತಿನ ರಾಜಕೀಯ ಸನ್ನಿವೇಶಕ್ಕೂ ಪ್ರಸ್ತುತ ಎಂಬಂತಿದೆ. ಈ ನಾಟಕ ಅಪ್ರಸ್ತುತ ಆಗುವಂತಹ ಒಳ್ಳೆಯ ರಾಜಕೀಯ ವ್ಯವಸ್ಥೆ ನಿರ್ಮಾಣ ಮಾಡಬೇಕಿದೆ ಎಂದು ತಿಳಿಸಿದರು.

ಸಮಾಜದಲ್ಲಿ ಪರಿವರ್ತನೆ ತರುವಂತ ಜಾಗೃತಿ ಮೂಡಿಸುವಂತಹ ಕೆಲವು ಬೀದಿ ನಾಟಕಗಳು ಮಾಡಿವೆ. ನಾನು ಸಹ ರಂಗಕರ್ಮಿ ಎಂದು ಹೇಳಿಕೊಳ್ಳಲು ಅಭಿಮಾನವಿದೆ. ಮುಖ್ಯಮಂತ್ರಿ ಚಂದ್ರು ಅವರು ಓಪನ್ ಹಾರ್ಟ್ ಸರ್ಜರಿ ಮಾಡಿಸಿಕೊಂಡಿದ್ದಾರೆ. ಆದರೂ ಅವರು ನಾಟಕ ಪ್ರದರ್ಶಿಸಲು ಬಂದಿದ್ದಾರೆ. ಕನ್ನಡ ರಂಗಭೂಮಿಗೆ ಅವರ ಕೊಡುಗೆ ಅಪಾರ ಎಂದು ಶ್ಲಾಘಿಸಿದರು.

ಮುಖ್ಯಮಂತ್ರಿ ನಾಟಕ ಜಾಗೃತಿ ಮೂಡಿಸುವಂತಹ ನಾಟಕ. ಹಿರಣ್ಣಯ್ಯನವರು ನಾಟಕಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದರು. ನಾವು ಸಮಾಜದಲ್ಲಿ ಪರಿವರ್ತನೆ ತರುವ ಎಲ್ಲಾ ಪ್ರಯತ್ನ ಮಾಡಬೇಕು. ಪರಸ್ಪರ ಪ್ರೀತಿ ಸಹಬಾಳ್ವೆ ಹೆಚ್ಚಿಸುವ ಆದರ್ಶವನ್ನು ನಾವು ಬೆಳೆಸಿಕೊಳ್ಳಬೇಕೆಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಮಾತನಾಡಿ, ಮುಖ್ಯಮಂತ್ರಿ ನಾಟಕ ಮೊದಲು ಹಿಂದಿಯಲ್ಲಿ ಪ್ರದರ್ಶನಗೊಂಡಿತು. ಬಹಳ ಹಿಂದೆಯೇ ಅದರ ಪ್ರದರ್ಶನ ನಿಂತುಹೋಯಿತು. ಆದರೆ, ಕನ್ನಡದಲ್ಲಿ ಇಷ್ಟು ಕಾಲ ಪ್ರದರ್ಶನ ಗೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದು ಪ್ರಶಂಸಿಸಿದರು.

ಮುಖ್ಯಮಂತ್ರಿ ನಾಟಕದ 700ನೇ ಪ್ರದರ್ಶನ ಎನ್ನುವುದು ಕೇವಲ ಸಂಖ್ಯೆಯಲ್ಲ, ಅದೊಂದು ಇತಿಹಾಸ ಮತ್ತು ಪರಂಪರೆ.

–ಟಿ.ಎಸ್.ನಾಗಾಭರಣ, ಹಿರಿಯ ರಂಗಕರ್ಮಿ

ನಮ್ಮೆಲ್ಲರ ನೆಚ್ಚಿನ ಮುಖ್ಯಮಂತ್ರಿಗಳು ಚಂದ್ರಣ್ಣ. ಈ ಹೊತ್ತಿನಲ್ಲಿ ಕಲಾಗಂಗೋತ್ರಿಗಾಗಿ ಶ್ರಮಿಸಿದ ಮಹಾನ್ ವ್ಯಕ್ತಿಗಳನ್ನು ಸ್ಮರಿಸಬೇಕು. ಚಂದ್ರಣ್ಣನವರ ಹೊಸ ನಾಟಕಗಳು ಮೂಡಿಬರಲಿ.

–ಉಮಾಶ್ರೀ, ಹಿರಿಯ ನಟಿ

ಚಂದ್ರು ಅವರ 'ಮುಖ್ಯಮಂತ್ರಿ' ನಾಟಕ ನೋಡಿ ರಾಮಕೃಷ್ಣ ಹೆಗಡೆ ಅವರು ಚಂದ್ರು ಅವರ ಅಭಿಮಾನಿಯಾಗಿ ಅವರಂತೆ ನಟಿಸಬೇಕೆಂದು ಹೇಳಿದ್ದರು. ಅದರಂತೆ ಸಿನಿಮಾದಲ್ಲಿ ನಟಿಸಿದರು. ಮುಖ್ಯಮಂತ್ರಿ ನಾಟಕ ಸಾವಿರ ಪ್ರದರ್ಶನ ಕಾಣಲಿ.

–ಡಾ.ವಿಜಯಾ, ಹಿರಿಯ ಪತ್ರಕರ್ತೆ

ನಾಟಕ ನಿರ್ಮಾಣದ ಸಂದರ್ಭದಲ್ಲಿದ್ದ ಅಂದಿನ ಮುಖ್ಯಮಂತ್ರಿ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸಲಿಲ್ಲ. ಅಷ್ಟರಿಂದ ನನಗೆ ಮುಖ್ಯಮಂತ್ರಿಯಾಗಲು ಚಂದ್ರು ಅವರೇ ಲಾಯಕ್ಕು ಎಂದು ಒಪ್ಪಿಕೊಂಡರು.

–ಹಂಪಾ ನಾಗರಾಜ್, ಹಿರಿಯ ವಿದ್ವಾಂಸ

ಇದು ನೋಡುವ ವೇದಿಕೆ, ಮಾತನಾಡುವ ವೇದಿಕೆಯಲ್ಲ. ಮುಖ್ಯಮಂತ್ರಿ ನಾಟಕ ಸಾವಿರ ಪ್ರದರ್ಶನ ಕಾಣಲಿ.

–ಕಮಲಾ ಹಂಪನಾ, ಹಿರಿಯ ಸಾಹಿತಿ

ಕನ್ನಡದ ಶ್ರೇಷ್ಠನಟ ಮುಖ್ಯ ಮಂತ್ರಿ ಚಂದ್ರು ಅವರು. ಕಲಾಗಂಗೋತ್ರಿ ಮತ್ತು ಕಲಾವಿದರಿಗೆ ಶುಭವಾಗಲಿ.

–ಮನುಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ